ಕರ್ನಾಟಕ ಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: ಡಿಟಿಇ/30/ಎಲ್‌ಆರ್‌ಡಿಸಿ/2014-15 /2426

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:20-10-2014.

## -:ಸುತ್ತೋಲೆ:-

ವಿಷಯ: ಪಾಲಿಟೆಕ್ನಿಕ್‌ಗಳಲ್ಲಿ ಎಜುಸ್ಯಾಟ್ ಕಾರ್ಯಕ್ರಮವನ್ನು ಪ್ರಸಾರ ಮಾಡುವ ಕುರಿತು.

ಉಲ್ಲೇಖ: ಸುತ್ತೋಲೆ ಸಂಖ್ಯೆ: ಡಿಟಿಇ/12/ಎಲ್‌ಆರ್‌ಡಿಸಿ/2013-14, ದಿನಾಂಕ: 3.10.2013

* * * * * *

ಶಿಕ್ಷಣರಂಗದಲ್ಲಿ ಎಜುಸ್ಯಾಟ್‌ನ ಉಪಯುಕ್ತತೆಯನ್ನರಿತು ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯವು ಎಜುಸ್ಯಾಟ್ ಕಾರ್ಯಕ್ರಮಗಳನ್ನು ಅಕ್ಟೋಬರ್ 2002 ರಿಂದ ದೇಶಾದ್ಯಂತ ಹಮ್ಮಿಕೊಂಡಿರುತ್ತದೆ. ಆದರಂತೆ ತಾಂತ್ರಿಕ ಶಿಕ್ಷಣ ಇಲಾಖೆಯು 2008-09 ನೇ ಸಾಲಿನಲ್ಲಿ ಡಿಎಸ್‌ಈಆರ್‌ಟಿ ಸ್ಟುಡಿಯೋದ ಸಹಾಯದಿಂದ ಪಾಲಿಟೆಕ್ನಿಕ್‌ಗಳಿಗೆ ಸಂಬಂದಿಸಿದಂತೆ ವಿಷಯ ಪರಿಣಿತರಿಂದ ಎಜುಸ್ಯಾಟ್ ಕಾರ್ಯಕ್ರಮದ ಮುಖಾಂತರ ತಾಂತ್ರಿಕ ವಿಷಯಗಳನ್ನು ಬೋಧಿಸುವ ಕಾರ್ಯಕ್ರಮವನ್ನು ಪ್ರಾರಂಭಿಸಿರುತ್ತದೆ. ಇತ್ತೀಚೆಗೆ ಈ ಕಾರ್ಯಕ್ರಮದ ಬೇಡಿಕೆ ಹೆಚ್ಚಾಗಿರುವುದರಿಂದ ತಾಂತ್ರಿಕ ಶಿಕ್ಷಣ ಇಲಾಖೆಯು, ಕಾಲೇಜು ಶಿಕ್ಷಣ ಇಲಾಖೆಯ ಜೊತೆಗೂಡಿ ಎಜುಸ್ಯಾಟ್ ಉಪಗ್ರಹ ಆಧಾರಿತ ಶೈಕ್ಷಣಿಕ ಕಾರ್ಯಕ್ರಮವನ್ನು ಪ್ರಸಾರ ಮಾಡಲು ಅನುಕೂಲವಾಗುವಂತೆ ನೂತನವಾಗಿ ಎಜುಸ್ಯಾಟ್ ಸ್ಟುಡಿಯೊವನ್ನು ಸರ್ಕಾರಿ ತಾಂತ್ರಿಕ ಮುದ್ರಣ ಸಂಸ್ಥೆಯ ಕಟ್ಟಡದಲ್ಲಿ ಸ್ಥಾಪಿಸಲಾಗಿದ್ದು, ಸದರಿ ಸ್ಟುಡಿಯೊವನ್ನು ದಿನಾಂಕ:28.08.2013 ರಂದು ಉದ್ಘಾಟಿಸಲಾಯಿತು. ಇಲಾಖೆಯಡಿಯಲ್ಲಿ ಬರುವ ಪಾಲಿಟೆಕ್ನಿಕ್‌ಗಳಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವಿವಿದ ವಿಷಯಗಳಲ್ಲಿ ನುರಿತ ವಿಷಯ ಪರಿಣಿತರಿಂದ ಎಜುಸ್ಯಾಟ್ ಕಾರ್ಯಕ್ರಮದ ಮುಖಾಂತರ ವಿಷಯಗಳನ್ನು ಭೋದಿಸುವ ಕಾರ್ಯಕ್ರಮವನ್ನು ಪೂರ್ಣ ಪ್ರಮಾಣದಲ್ಲಿ ದಿನಾಂಕ: 01.01.2014 ರಿಂದ ಪ್ರಸಾರ ಪ್ರಾರಂಭಿಸಿಸಲಾಯಿತು.

ಈ ಪ್ರಯುಕ್ತ ಕಾರ್ಯಕ್ರಮವನ್ನು ವಿಧ್ಯಾರ್ಥಿಗಳು ವೀಕ್ಷಿಸಲು ಅನುಕೂಲವಾಗುವಂತೆ ಬೇಕಾಗುವ ಉಪಕರಣಗಳನ್ನು ಖರೀದಿಸಿ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳಲು ಉಲ್ಲೇಖದ ಪತ್ರದಲ್ಲಿ ಸೂಚಿಸಲಾಗಿತ್ತು. ಆದರು ಸಹ ಬಹುತೇಕ ಪಾಲಿಟೆಕ್ನಿಕ್‌ಗಳಲ್ಲಿ ಇಲ್ಲಿಯವರೆಗು ಸದರಿ ವ್ಯವಸ್ಥೆಯನ್ನು ಮಾಡಿಕೊಳ್ಳದಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ತಮ್ಮೆಲ್ಲರಿಗು ತಿಳಿದಿರುವಂತೆ ದಿನಾಂಕ:16.10.2014 ರಂದು

ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಮತ್ತು ತಾಂತ್ರಿಕ ಪರೀಕ್ಷಾ ಮಂಡಳಿಯ ಅಧಿಕಾರಿಗಳು ದಿನಾಂಕ:05.11.2014 ರಿಂದ ಪ್ರಾರಂಭವಾಗಲಿರುವ ಪರೀಕ್ಷೆಗಳನ್ನು ನಡೆಸುವ ಸಂಬಂದ ವಿವರವಾದ ಮಾಹಿತಿಯನ್ನು ಎಲ್ಲಾ ಸರ್ಕಾರಿ/ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ, ಪರೀಕ್ಷ ಸಂಯೋಜಕರುಗಳಿಗೆ ಮತ್ತು ಎಲ್ಲಾ ಪರೀಕ್ಷ ಸಿಬ್ಬಂದಿಗಳಿಗೆ ಎಜುಸ್ಯಾಟ್‌ನ ಭಾನುಲಿತರಂಗದ ಮುಖಾಂತರ ನೀಡಿರುತಾರೆ. ಮತ್ತೆ ದಿನಾಂಕ:31.10.2014 ರಂದು ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಮತ್ತು ತಾಂತ್ರಿಕ ಪರೀಕ್ಷಾ ಮಂಡಳಿಯ ಅಧಿಕಾರಿಗಳು ದಿನಾಂಕ:05.11.2014 ರಿಂದ ಪ್ರಾರಂಭವಾಗಲಿರುವ ಪರೀಕ್ಷೆಗಳನ್ನು ನಡೆಸುವ ಸಂಬಂದ ಹೆಚ್ಚಿನ ವಿವರವಾದ ಮಾಹಿತಿಯನ್ನು ಎಲ್ಲಾ ಸರ್ಕಾರಿ/ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ, ಪರೀಕ್ಷ ಸಂಯೋಜಕರುಗಳಿಗೆ ಮತ್ತು ಎಲ್ಲಾ ಪರೀಕ್ಷ ಸಿಬ್ಬಂದಿಗಳಿಗೆ ಎಜುಸ್ಯಾಟ್‌ನ ಭಾನುಲಿತರಂಗದ ಮುಖಾಂತರ ಪ್ರಸಾರಮಾಡಲಾಗುವುದು. ನಿಖರವಾದ ಸಮಯ ಮತ್ತು ಹೆಚ್ಚಿನ ಮಾಹಿತಿಯನ್ನು BTELinx ಮೂಲಕ ನೀಡಲಾಗುವುದು.

ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮದ ಜೊತೆಗೆ ಪರೀಕ್ಷೆ, ಆಡಳಿತ, ಮತ್ತು ಹೊಸ ಯೋಜನೆಗಳಿಗೆ ಸಂಬಂದಿಸಿದ ಎಲ್ಲಾ ಮಾಹಿತಿಯನ್ನು ಎಜುಸ್ಯಾಟ್‌ನ ಭಾನುಲಿತರಂಗದ ಮುಖಾಂತರ ನೀಡಲಾಗುವುದು. ಆದ ಪ್ರಯುಕ್ತ ಸದರಿ ಕಾರ್ಯಕ್ರಮದ ಉಪಯೋಗವನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ಎಲ್ಲಾ ಸರ್ಕಾರಿ/ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯಕ್ರಮವನ್ನು ವೀಕ್ಷಿಸಲು ಬೇಕಾಗುವ ಉಪಕರಣಗಳನ್ನು ಖರೀದಿಸಿ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳಲು ಮತ್ತೊಮ್ಮೆ ಸೂಚಿಸಲಾಗಿದೆ. ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ಉಪಕರಣಗಳ ಮಾಹಿತಿಗಾಗಿ COSMIC INFOSYSTEMS PRIVATE LIMITED, BANGALURU.ಇವರನ್ನು ಸಂಪರ್ಕಿಸಬಹುದು(ದೂರವಾಣಿ ಸಂ: 9341475557)

ಜಂಟಿ ನಿರ್ದೇಶಕರು(ಪಿಡಿಸಿ)

ಇವರಿಗೆ:

1. ಎಲ್ಲಾ ಸರ್ಕಾರಿ/ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಇ.ಆಡಳಿತ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ.